# <u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.2273/2017
ಸಿಡಬ್ಲ್ಯೂ.1 ಪಿಡಬ್ಲ್ಯೂ2

| | | |
|---|---|---|
| ಸಾಕ್ಷಿಯ ಹೆಸರು | - | ರವಿ ಮಲ್ಲಪ್ಪಾ ಮುರಗೋಡ |
| ವಯಸ್ಸು | - | 48 ವರ್ಷ |
| ಉದ್ಯೋಗ | - | ಅಬಕಾರಿ ಉಪಅಧಿಕ್ಷಕರು |
| ವಾಸ | - | ಬೆಳಗಾವಿ |

ದಿನಾಂಕಃ 20-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ನಾನು ಸೆಪ್ಟೆಂಬರ 2014 ರಿಂದ ಅಗಸ್ಟ 2019 ರವರೆಗೆ ಅಬಕಾರಿ ಉಪಅಧೀಕ್ಷರು ಗೋಕಾಕ ವಲಯದಲ್ಲಿ ಅಂತಾ ಕಾರ್ಯನಿರ್ವಹಿಸಿರುತ್ತೇನೆ.

ದಿಃ 03-01-2017 ರಂದು ಸಂಜೆ ಬಂದ ಬಾತ್ಮಿ ಮೇರೆಗೆ ಗೋಕಾಕದಿಂದ ಖಾಸಗಿ ವಾಹನವನ್ನು ತೆಗೆದುಕೊಂಡು ಅಂಕಲಗಿಗೆ ಹೋಗಿ ಇಬ್ಬರನ್ನು ಪಂಚರನ್ನು ಕರೆದು ದಾಳಿ ಮಾಡುವ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗ ಅವರನ್ನು ನಮ್ಮ ಜೊತೆ ಕರೆದುಕೊಂಡು ಗುಜನಾಳ ಗ್ರಾಮಕ್ಕೆ ಹೋಗಿ ಗುಡ್ಡದ ವಾರೆಗೆ ನಮ್ಮ ವಾಹನವನ್ನು ನಿಲ್ಲಿಸಿ ನಾವು ಎರಡು ತಂಡವಾಗಿ ಅರ್ಧ ಕಿ.ಮೀ ನಡೆದುಕೊಂಡು ಗುಡ್ಡದ ಕಾಲು ದಾರಿಯಲ್ಲಿ ಹೋಗಿದ್ದು ಅಲ್ಲಿ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋದನು. ಅಲ್ಲಿದ್ದ ಅಕ್ಕಪಕ್ಕದವರನ್ನು ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವನ ಹೆಸರು ಬಸವಣ್ಣಿ ಬೀರನಾಯ್ಕ ಅಂತಾ ತಿಳಿಸಿದರು. ಓಡಿ ಹೋದ ವ್ಯಕ್ತಿಯು ನಿಂತ ಸ್ಥಳಕ್ಕೆ ಹೋಗಿ ಶೋಧನಾ ಸಮುಚಿತ ಆಧಾರ ತಯಾರಿಸಿ ಸ್ಥಳವನ್ನು ಪರಿಶೀಲಿಸಲಾಗಿ ಒಂದು ಚೀಲದಲ್ಲಿ ಒಂದು ಕರಿ ಬಣ್ಣದ ರಬ್ಬರ ಟ್ಯೂಬನಲ್ಲಿ 20 ಲೀಟರದಷ್ಟು ಕಳ್ಳಭಟ್ಟಿ ಸರಾಯಿ ಇದ್ದದ್ದು ಕಂಡು ಬಂದಿರುತ್ತದೆ. ಅದರ ವಾಸನೆ ಘಾಟು ವಾಸನೆಯಾಗಿದ್ದು, ಅದು ಕಳ್ಳಭಟ್ಟಿ ಸರಾಯಿ ಇದ್ದು ಅದನ್ನು ಆರೋಪಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾನೆ ಅಂತಾ ತಿಳಿದು ಬಂತು. ನಂತರ ಅದರಲಿಂದ 180 ಎಂ.ಎಲ.ನ ಕಳ್ಳಭಟ್ಟಿ ಸರಾಯಿಯನ್ನು ಒಂದು ಬಾಟಲಿಯಲ್ಲಿ ಮಾದರಿ ಅಂತಾ ರಸಾಯನಿಕ ಪರೀಕ್ಷೆಗೋಸ್ಕರ ತೆಗೆದು ಅದಕ್ಕೆ ಬಿಳಿ ಬಟ್ಟೆಯನ್ನು ಸುತ್ತಿ ದಾರದಿಂದ ಕಟ್ಟಿ ಅರಗೀನ ಶೀಲ ಮಾಡಿ ನಂತರ ಗುಡ್ಡದ ಕೆಳಗೆ ಇಳಿದು ಬಂದು ಅಲ್ಲಿನ ಊರಿನ ಗ್ರಾಮಸ್ಥರಿಗೆ ಆರೋಪಿಯ ಬಗ್ಗೆ ವಿಚಾರಿಸಲಾಗಿ ಸದರಿಯವರು ಆರೋಪಿತನ ಹೆಸರು ಹೇಳಿ, ಆರೋಪಿತನೇ ಇಲ್ಲಿ ಬಂದು ಕಳ್ಳಭಟ್ಟಿ ಸರಾಯಿ ಮಾರುತ್ತಾನೆ ಅಂತಾ ತಿಳಿಸಿರುತ್ತಾರೆ. ರಾತ್ರಿ 8-40 ರಿಂದ 9-30 ರ ವರೆಗೆ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮುಗಿಸಿದೆವು. ಅಲ್ಲಿ ದೊರೆತ ಮಾಲನ್ನು ಮತ್ತು ಮಾದರಿ ತೆಗೆದ ಮಾಲನ್ನು ನನ್ನ ತಾಬಾಕ್ಕೆ ತೆಗೆದುಕೊಂಡು ಮರಳಿ ಕಚೇರಿಗೆ ಬಂದು ಸರಕಾರಿ ತರ್ಫೆ ಪಿರ್ಯಾದಿ ದಾಖಲಿಸಿ ನಮ್ಮ ಕಚೇರಿ ಗುನ್ನೆ ನಂ. 76/2016-17 ರಂತೆ ಪ್ರಥಮ ವರ್ತಮಾನವನ್ನು ದಾಖಲಿಸಿರುತ್ತೇನೆ. ಡಿಸಿ ಬೆಳಗಾವಿ ರವರಿಗೆ ಜಪ್ತಾದ ಮಾಲನ್ನು ನನ್ನ ತಾಬಾದಲ್ಲಿ ಇಟ್ಟುಕೊಳ್ಳಲು ಮತ್ತು ಮುಂದಿನ ತನಿಖೆಯನ್ನು ಕೈಗೊಳ್ಳಲು ಮನವಿಯನ್ನು ಬರೆದು ಮರುದಿನ ಬೆಳಿಗ್ಗೆ ಮನವಿಯನ್ನು ಕಳುಹಿಸಿರುತ್ತೇನೆ.

ದಿಃ 17-01-2017 ರಂದು ರಸಾಯನಿಕ ಪರೀಕ್ಷೆಗೋಸ್ಕರ ಧಾರವಾಡ ಪ್ರಯೋಗಾಲಯಕ್ಕೆ ಮನವಿ ಪತ್ರ ಬರೆದು ಅದೇ ದಿನ ಚಾಸಾ-6 ರವರಿಗೆ ಮುಂದಿನ ತನಿಖೆಯನ್ನು ಹಸ್ತಾಂತರಿಸಿರುತ್ತೇನೆ.

ಶೋಧನಾ ಸಮುಚ್ಚಿತ್ತ ಆಧಾರ ನಿಪಿ-1(ಎ), ಪಂಚನಾಮೆ ನಿಪಿ-2, ಸಾಕ್ಷಿಯ ಸಹಿ ನಿಪಿ-2(ಎ), ಪಿರ್ಯಾದಿ ನಿಪಿ-3, ಸಾಕ್ಷಿಯ ಸಹಿ ನಿಪಿ-3(ಎ), ಪ್ರಥಮ ವರ್ತಮಾನ ವರದಿ ನಿಪಿ-4, ಸಾಕ್ಷಿಯ ಸಹಿ ನಿಪಿ-4(ಎ), ಡಿಸಿ ಬೆಳಗಾವಿ ರವರಿಗೆ ಬರೆದ ಪತ್ರ ನಿಪಿ-5, ಸಾಕ್ಷಿಯ ಸಹಿ ನಿಪಿ-5(ಎ), ವಿಭಾಗೀಯ ರಸಾಯನಿಕ ಪರೀಕ್ಷಕರು ಧಾರವಾಡ ವಿಭಾಗ ರವರಿಗೆ ಬರೆದ ಪತ್ರ ನಿಪಿ-6, ಸಾಕ್ಷಿಯ ಸಹಿ ನಿಪಿ-6(ಎ) ಎಂದು ಗುರುತಿಸಲಾಯಿತು.

ಮುದ್ದೆ ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಮಾದರಿಗೆ ತೆಗೆದ 180 ಎಂ.ಎಲ.ನ ಕಳ್ಳಭಟ್ಟಿ ಸರಾಯಿ ಬಾಟಲಿಯನ್ನು ಈಗಾಗಲೇ MO-1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ಗುರುತಿಸುತ್ತೆನೆ. ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ಆರೋಪಿ ಆಗಿರುತ್ತಾನೆ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದಃ

ದಿಃ 03-01-2017 ರಂದು ನಾನು ಗೋಕಾಕ ಕಚೇರಿಯಲ್ಲಿ ಕರ್ತವ್ಯ ನಿರತನಾಗಿದ್ದೇನೆ. ನನಗೆ ಸಂಜೆ 7-00 ಗಂಟೆಗೆ ಬಾತ್ಮಿ ಬಂದಿರುತ್ತದೆ. 5 ನಿಮಿಷದಲ್ಲಿ ನಾನು ನಮ್ಮ ಸಿಬ್ಬಂದಿಗೆ ದಾಳಿ ವಿಷಯ ತಿಳಿಸಿದೆನು. ನಮಗೆ ಸರಕಾರದ ಜೀಪು ಇರುತ್ತದೆ. ನಮ್ಮ ಸರಕಾರಿ ವಾಹನ ತೆಗೆದುಕೊಂಡು ಹೋದರೆ ಗುರುತು ಹಿಡಿಯುತ್ತಾರೆ ಎಂದು ಖಾಸಗಿ ವಾಹನ ತೆಗೆದುಕೊಂಡು ಹೋದೆವು. ಖಾಸಗಿ ವಾಹನ ಕರೆಸಲು 5 ರಿಂದ 10 ನಿಮಿಷ ಬೇಕಾಯಿತು. ಸದರಿ ವಾಹನದ ಸಂಖ್ಯೆ ಮತ್ತು ಅದರ ಚಾಲಕ ಯಾರು ಎಂದು ಹೇಳಲು ಬರುವುದಿಲ್ಲ. ಗೋಕಾಕದಿಂದ ಗುಜನಾಳ ಗ್ರಾಮಕ್ಕೆ ಹೋಗಲು 34 ಕಿ.ಮೀ, ಅಲ್ಲಿಗೆ ಹೋಗಲು 40 ನಿಮಿಷ ಬೇಕಾಗುತ್ತದೆ. ಅಂಕಲಗಿಗೆ ಹೋದಾಗ ರಾತ್ರಿ 7-45 ಗಂಟೆಯಾಗಿತ್ತು. ಪಂಚರನ್ನು ಚಾಸಾ-4 ರವರು ಕರೆದುಕೊಂಡು ಬಂದಿರುತ್ತಾರೆ. ಒಬ್ಬ ಪಂಚನ ಹೆಸರು ರಾಜು ಸಾಃ ಲಗಮೇಶ್ವರ, ಇನ್ನೊಬ್ಬ ಪಂಚ ಬಂದಿದ್ದನು ಆದರೆ ರಾತ್ರಿಯಾಗಿದ್ದರಿಂದ ಕಳ್ಳಭಟ್ಟಿ ದಾಳಿಗೆ ಬರುವುದಿಲ್ಲಾ ಎಂದು ಮಧ್ಯದಲ್ಲಿ ಗಾಡಿಯಿಂದ ಇಳಿದುಕೊಂಡನು. ಆದ್ದರಿಂದ ನಮ್ಮ ಸಿಬ್ಬಂದಿಯನ್ನು ಇನ್ನೊಬ್ಬ ಪಂಚನಾಗಿ ನೇಮಿಸಿದೆನು. ಅಂಕಲಗಿಯಿಂದ ಹೊರಟಾಗ ರಾತ್ರಿ 8-10 ಗಂಟೆಯಾಗಿತ್ತು. ಅಂಕಲಗಿಯಿಂದ ಗುಜನಾಳ ಗ್ರಾಮ 4 ಕಿ.ಮೀ ಆಗುತ್ತದೆ, ಅಲ್ಲಿಗೆ ಹೋಗಲು 10 ನಿಮಿಷ ಬೇಕಾಗುತ್ತದೆ. ನಿಪಿ-1 ನ್ನು ದಾಳಿ ಮಾಡುವ ಮೊದಲು ಬರೆದೆನು ಆಗ ರಾತ್ರಿ 8-30 ಗಂಟೆಯಾಗಿತ್ತು. ನಿಪಿ-1 ನ್ನು ತಯಾರಿಸಲು 15-20 ನಿಮಿಷ ಬೇಕಾಗಿಯಿತು ಎಂದರೆ ಸರಿಯಲ್ಲ. ಸಾಕ್ಷಿಯು 5 ನಿಮಿಷ ಬೇಕಾಯಿತು ಎಂದು ನುಡಿಯುತ್ತಾರೆ. ಗುಜನಾಳ ಗುಡ್ಡದ ಹತ್ತಿರ ಹೋದಾಗ ನಾವು ಎರಡು ತಂಡಗಳಾಗಿದ್ದು ಒಂದು ತಂಡದಲ್ಲಿ ನಾನು, ಚಾಸಾ-4 ಮತ್ತು ಪಂಚರು ಇದ್ದೆವು ಮತ್ತು ಇನ್ನೊಂದು ತಂಡದಲ್ಲಿ ಚಾಸಾ-6, 3 ಮತ್ತು ಸಿದ್ದಪ್ಪಾ ಹಾದಿಮನಿ ಅಂತಾ ಪೇದೆ ಇದ್ದರು. ಸಾಮಾನ್ಯವಾಗಿ ಗುಡ್ಡಗಾಡು ಪ್ರದೇಶದಲ್ಲಿ ಮರ ಗಿಡಗಳು ಕಲ್ಲುಗಳು ಇರುತ್ತವೆ ಮತ್ತು ಕತ್ತಲು ಆವರಿಸಿರುತ್ತದೆ ಎಂದರೆ ಸರಿ.

ನಾವು ಅರ್ಧ ಕಿ.ಮೀ ನಡೆದು ಹೋಗಲು 10 ನಿಮಿಷ ಬೇಕಾಯಿತು. ಗುಡ್ಡಗಾಡದಲ್ಲಿ ಸಾಮಾನ್ಯ ಜನ ಅಡ್ಡಾಡುವುದಿಲ್ಲಾ ಅಂದರೆ ಅಲ್ಲಿ ಕಳ್ಳಭಟ್ಟಿ ಸರಾಯಿ ಕುಡಿಯುವ ಜನ ಇದ್ದರು. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ದೊರೆತ ರಬ್ಬರ ಟ್ಯೂಬದಲ್ಲಿ 20 ಲೀಟರ ಇತ್ತು ಎಂದು ಹೇಗೆ ಮಾಪನ ಮಾಡಿದ್ದಿರಿ ಪ್ರಶ್ನೆಗೆ ಸಾಕ್ಷಿಯು ನಮಗೆ ರಬ್ಬರ ಟ್ಯೂಬ ನೋಡಿ ಅಳತೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಓಡಿ ಹೋದಾಗ ರಾತ್ರಿ 8-35 ಗಂಟೆಯಾಗಿತ್ತು. ಗುಡ್ಡದಿಂದ ಕೆಳಗೆ ಇಳಿದು ಅರ್ಧ ಕಿ.ಮೀ ನಡೆದು ಬರಲು 15-20 ನಿಮಿಷ ಬೇಕಾಯಿತು. ಆರೋಪಿಯ ಬಗ್ಗೆ ವಿಚಾರಿಸಿದ ಜನರ ಹೇಳಿಕೆ ಪಡೆದಿಲ್ಲಾ ಎಕೆಂದರೆ ಸದರಿ ಜನರು ಹೇಳಿಕೆ

ಕೊಡಲು ತಮಗೆ ಜೀವದ ಭಯ ಇದೆ ಎಂದು ತಮ್ಮ ಹೆಸರು ತಿಳಿಸಲಿಲ್ಲಾ. ನಿಪಿ-2 ರಲ್ಲಿ ಪಂಚನಾಮೆಯನ್ನು ಬರೆದು ಮುಗಿಸಿದ ಸಮಯ ಬರೆದಿಲ್ಲಾ ಎಂದರೆ ಸರಿ. ನಿಪಿ-2 ರಲ್ಲಿ ಎಷ್ಟು ಎಂ.ಎಲ ಕಳ್ಳಭಟ್ಟಿ ಸರಾಯಿಯನ್ನು ಮಾದರಿ ತೆಗೆದುಕೊಂಡೆವು ಎಂದು ಬರೆದಿಲ್ಲ.

ನಮ್ಮ ಕಚೇರಿಯಲ್ಲಿ ಪಿರ್ಯಾದಿಯ ಪಾರ್ಮೆಟ ಇರುತ್ತವೆ ಎಂದರೆ ಸರಿಯಲ್ಲ. ಆರೋಪಿಯು 2017 ರಲ್ಲಿ ರಾಜನಕಟ್ಟಿಯಲ್ಲಿ ಗ್ರಾ ಪಂ ಸದಸ್ಯ ಇದ್ದನು ಮತ್ತು ಈಗಲೂ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ರಾಜಕೀಯ ವೈರಿಯಾದ ಸುರೇಶ ನಿಂಗಪ್ಪಾ ಡಬ್ಬನಾಯ್ಕ ರವರ ಮಾತುಕೇಳಿ ಆರೋಪಿಯ ವಿರುದ್ಧ ಖೊಟ್ಟಿ ಪಿರ್ಯಾದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದಲ್ಲಿ ಜಪ್ತುಪಡಿಸಿದ ಕಳ್ಳಭಟ್ಟಿ ಸರಾಯಿಯನ್ನು ಈ ಪ್ರಕರಣಕ್ಕೆ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ. ಕಚೇರಿಯಲ್ಲಿ ಪಂಚನಾಮೆ ಖೊಟ್ಟಿ ಪಂಚನಾಮೆ ತಯಾರಿಸಿ ಠಾಣೆಯಲ್ಲಿ ಮತ್ತು ಪಂಚರ ಮತ್ತು ಸಿಬ್ಬಂದಿಯ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ರಸಾಯನಿಕ ಪರೀಕ್ಷೆಗೆ ಮನವಿ ಪತ್ರ ಬರೆದ ಬಗ್ಗೆ ಮರು ಹೇಳಿಕೆ ನೀಡಿರುತ್ತೇನೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಬಾತ್ಮಿ ಬಂದಿರಲಿಲ್ಲಾ, ಯಾವದೇ ದಾಳಿ ಮಾಡಿಲ್ಲಾ, ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲಾ, ಮಾದರಿ ಮಾಲು ತೆಗೆದಿಲ್ಲಾ ಎಂದರೆ ಸರಿಯಲ್ಲ. ಆರೋಪಿ ಯಾವದೇ ತಪ್ಪು ಮಾಡಿರದಿದ್ದರೂ ರಾಜಕೀಯದವರ ಮಾತುಕೇಳಿ ಸುಳ್ಳು ಪಿರ್ಯಾದಿ ಸಲ್ಲಿಸಿ ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.